ಪ್ರಾಸಾಃ 2

ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

| | |
|---|---|
| ಸಾಕ್ಷಿದಾರರ ಹೆಸರು | ಡಿ.ಎಂ ಚಿಕ್ಕಈರಯ್ಯ |
| ತಂದೆಯ ಹೆಸರು | ಲೇಟ್ ಮುನಿಹುಚ್ಚಯ್ಯ |
| ವಯಸ್ಸು | 53 ವರ್ಷ |
| ಉದ್ಯೋಗ | ಎ.ಎಸ್.ಐ ಪೊ.ಠಾ. ಜೆ.ಪಿ ನಗರ, ಬೆಂಗಳೂರು |
| ವಾಸ | ವಸಂತ್ ನಗರ, ಬೆಂಗಳೂರು |

ದಿನಾಂಕಃ 08.10.2024 ರಂದು ಸಾಕ್ಷಿಗೆ **ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ದಂ.ಸಂ.ಪ್ರ. ಕಲಂ 299 ರಡಿಯಲ್ಲಿ ಹಿರಿಯ ಸಸಅ ಅವರಿಂದಃ**

1. ನಾನು ಜುಲೈ 2019 ರಿಂದ ಆಗಸ್ಟ್2024 ರವರೆಗೆ ಮೈಕೊಲೇಔಟ್ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.
2. ಈ ಪ್ರಕರಣದ ಆರೋಪಿ ವಿರುದ್ಧ ಉದ್ಘೋಷಣೆ ಮಾಡಲು ನ್ಯಾಯಾಲಯದಿಂದ ಆದೇಶ ಬಂದಿರುತ್ತದೆ. ಸದರಿ ಆದೇಶ ಅನುಸಾರ ಆರೋಪಿಯ ವಿಳಾಸ ಮನೆ ಸಂಖ್ಯೆ 12, 3ನೇ ಕ್ರಾಸ್, 4ನೇ ಮೈನ್, ಎನ್.ಎಸ್ ಪಾಳ್ಯ, ಬಿಟಿಎಂ 2ನೇ ಹಂತ, ಬೆಂಗಳೂರು ಇಲ್ಲಿಗೆ ಹೋಗಿ ಅಲ್ಲಿರುವ ಜನರಲ್ಲಿ ಆರೋಪಿಯ ಕುರಿತು ವಿಚಾರಿಸಿದಾಗ ಯಾವುದೇ ಮಾಹಿತಿ ಸಿಗಲಿಲ್ಲ. ಪಂಚರಾದ ಫಿರೋಜ್ ಮತ್ತು ಮಂಜಪ್ಪ ಎಂಬ ಇಬ್ಬರು ಪಂಚರನ್ನು ಸ್ಥಳದಲ್ಲಿಯೇ ಕರೆದುಕೊಂಡೆ. ಅಲ್ಲಿ ಸೇರಿದ ಜನರ ಮುಂದೆ ಆರೋಪಿಯ ಹಾಜರಾತಿ ಸಲುವಾಗಿ ನೀಡಿದ

ಉದ್ಘೋಷಣೆಯನ್ನು ಜೋರಾಗಿ ಕೂಗಿ ಹೇಳಿದೆವು. ನಂತರ ಸದರಿ ಉದ್ಘೋಷಣೆಯ ಬಿತ್ತಿ ಪತ್ರಗಳನ್ನು ಆರೋಪಿಯ ಮನೆಯ ಗೋಡೆಗೆ ಅಂಟಿಸಿದೆನು. ಈ ಕುರಿತು ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 2.00 ಗಂಟೆಯವರೆಗೆ ಜರುಗಿಸಿದೆನು.

3. ಉದ್ಘೋಷಣೆಯ ಆದೇಶವನ್ನು **ನಿಪಿ–8**, ಉದ್ಘೋಷಣೆಯ ಪಂಚನಾಮೆಯನ್ನು **ನಿಪಿ–9** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ–9(ಎ)** ಎಂದು ಗುರುತಿಸಲಾಯಿತು.

**(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

**(ರಂಗೇಗೌಡ ಸಿ)**

**ಮು. ಮ. ಚಂ. ನ್ಯಾ. ಬೆಂ. ನಗರ.**